

# ‘ಆದರ್ಶ’ಪ್ರಾಯ!

■ ಪ್ರವೀಣ ಕುಲಕರ್ಣಿ

ಅನನುಕೂಲದ ಸನ್ನಿವೇಶಗಳಲ್ಲೇ ವಿಶಿಷ್ಟ ಸಾಧನೆಗಳು ಹೊರಹೊಮ್ಮುತ್ತವೆ ಎಂಬ ಮಾತೊಂದಿದೆ. ಮಹಾನ್ ಸಾಧಕರ ಕಥನಗಳ ಮೇಲೆ ಕಣ್ಣು ಹಾಯಿಸಿದಾಗ ಈ ಮಾತು ದಿಟ ಎಂದೆನಿಸುತ್ತದೆ. ಇಂತಹ ವಿಶಿಷ್ಟ ಸಾಧನೆಯ ಜ್ವಲಂತ ಉದಾಹರಣೆಯಾಗಿ ಬಿಹಾರದ ಹುಡುಗ ಆದರ್ಶ ಕುಮಾರ್ ಈಗ ನಮ್ಮ ಮುಂದೆ ನಿಂತಿದ್ದಾನೆ. 18 ವರ್ಷದ ಈ ವಿದ್ಯಾರ್ಥಿ–ಅನ್ವೇಷಕ ತೋರಿದ ಸಾಧನೆಗಾಗಿ ಇಂಗ್ಲೆಂಡ್‌ನ ಸ್ವಯಂಸೇವಾ ಸಂಸ್ಥೆಯು (Chegg.org) ಕೊಡಮಾಡುವ ‘ಗ್ಲೋಬಲ್ ಸ್ಟೂಡೆಂಟ್ ಪ್ರಶಸ್ತಿ–2025’ಕ್ಕೆ ಈತ ಆಯ್ಕೆಯಾಗಿದ್ದಾನೆ. ಪ್ರಶಸ್ತಿಯ ಜತೆ ಲಕ್ಷ ಡಾಲರ್ (₹ 88 ಲಕ್ಷ) ಬಹುಮಾನವನ್ನೂ ಜೇಬಿಗಿಳಿಸಿದ್ದಾನೆ.

ಉತ್ತರ ಭಾರತದ ನದಿಗಳ ಪಾತ್ರ ವಿಶಾಲವಾಗಿರುತ್ತದೆ. ಹೀಗಾಗಿ ಆ ನದಿಗಳಲ್ಲಿ ಅಂತಹ ಸೆಳವು ಇರುವುದಿಲ್ಲ. ಅವುಗಳು ಪ್ರಶಾಂತವಾಗಿ ಹರಿಯುತ್ತವೆ. ಆದರೆ, ದಕ್ಷಿಣ ಭಾರತದ ನದಿಗಳ ಪಾತ್ರ ಇಕ್ಕಟ್ಟಾಗಿರುತ್ತದೆ. ಅಡೆತಡೆಗಳು ಹೆಚ್ಚು. ಅಲ್ಲಲ್ಲಿ ಪ್ರಪಾತಗಳೂ ಇರುತ್ತವೆ. ಹೀಗಾಗಿ ಈ ನದಿಗಳಲ್ಲಿ ಭಾರಿ ಕಸುವು ತುಂಬಿರುತ್ತದೆ. ಅವುಗಳು ರಭಸವಾಗಿ ಹರಿಯುತ್ತವೆ. ಹಾಗೆಯೇ ವ್ಯಕ್ತಿಯ ಜೀವನ. ಯಾವ ಅಡೆತಡೆ, ಸಮಸ್ಯೆ ಏನೊಂದೂ ಇಲ್ಲದ ವ್ಯಕ್ತಿಗಿಂತ ಸಂಕಷ್ಟಗಳ ಮಧ್ಯೆ ಅರಳುವ ವ್ಯಕ್ತಿತ್ವಗಳಿಗೆ ಸಾಧನೆಯ ಕಿಚ್ಚು ಹೆಚ್ಚು. ಆದರ್ಶ, ಅಂತಹ ಪಂಥಕ್ಕೆ ಸೇರುವ ಸಾಧಕ.

ಆದರ್ಶನ ಸಾಧನೆಯ ಅಗಾಧತೆ ಎಷ್ಟೆಂಬುದರ ಅರಿವು ನಿಮಗಾಗಬೇಕೇ? 148 ದೇಶಗಳಿಂದ ಬಂದಿದ್ದ ಒಟ್ಟಾರೆ ಹನ್ನೊಂದು ಸಾವಿರದಷ್ಟು ನಾಮನಿರ್ದೇಶನಗಳಲ್ಲಿ, ಎಲ್ಲರನ್ನೂ ಮೀರಿಸಿ ಆಯ್ಕೆಯಾದ ಹುಡುಗ ಈತ. ಕಲಿಯುವಾಗಲೇ ಸಮಾಜದಲ್ಲಿ ಸಕಾರಾತ್ಮಕ ಪರಿಣಾಮ ಬೀರುವಂತಹ ಕಾರ್ಯ ಮಾಡಿದ್ದಕ್ಕೆ ಪ್ರಶಸ್ತಿಗೆ ಭಾಜನನಾಗಿದ್ದಾನೆ. ಬಿಹಾರದ ಚಂಪಾರಣ್ ಎಂಬಲ್ಲಿ ಜನಿಸಿದ ಆದರ್ಶ, ಮನೆಗೆಲಸ ಮಾಡುತ್ತಿದ್ದ ಅಮ್ಮನ ಆಸರೆಯಲ್ಲಿ ಬೆಳೆದ ಹುಡುಗ. ಮನೆ–ಮನೆಗೆ ಹೋಗಿ ಪಾತ್ರೆ ತೊಳೆಯುತ್ತಾ, ಸಿಕ್ಕ ಗಳಿಕೆಯಿಂದ ಮಗನನ್ನು ಓದಿಸಲು ಹೆಣಗಾಡಿದವರು ಆತನ ಅಮ್ಮ. ಬಾಲ್ಯದಿಂದಲೇ ಬಡತನದ ಈ ಕಡುಕಷ್ಟದ ಅನುಭವ ಪಡೆದಿದ್ದ ಆದರ್ಶ, ಪಟ್ಟು ಹಿಡಿದು ಓದಿ ಜೈಪುರದ ಜಯಶ್ರೀ ಪೆರಿವಾಲ್ ಅಂತರರಾಷ್ಟ್ರೀಯ ಶಾಲೆಯಲ್ಲಿ ಕಲಿಯುತ್ತಿರುವಾಗ ಫುಲ್ ರೈಡ್ ಸ್ಕಾಲರ್‌ಷಿಪ್ (₹ 30 ಲಕ್ಷ) ಪಡೆದಿದ್ದ. ಹಾಗೆ ಸಿಕ್ಕ ನೆರವಿನಿಂದ, ತನ್ನಂತೆಯೇ ಅಸಹಾಯಕ ಸ್ಥಿತಿಯಲ್ಲಿದ್ದವರಿಗೆ ಸಹಾಯವನ್ನೂ ಮಾಡಿದ್ದ.

‘ಪ್ರಶಸ್ತಿ ಸಿಕ್ಕಿದೆ ಎಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಇನ್ನಷ್ಟು ಪರಿಶ್ರಮ ಹಾಕಿ ಕೆಲಸ ಮಾಡಲು ಈ ಪ್ರಶಸ್ತಿ ನನ್ನನ್ನು ಹುರಿದುಂಬಿಸಿದೆ. ಸಮಾಜದಲ್ಲಿ ಯಾವ ಬದಲಾವಣೆಯನ್ನು ನೀವು ಕಾಣಲು ಬಯಸುವಿರೋ ಆ ಬದಲಾವಣೆಯ ಮೊದಲ ಬಿಂದು ನೀವೇ ಆಗಿ. ದೊಡ್ಡ ಕನಸನ್ನು ಕಾಣಿ’ ಎಂದು ಹೇಳುತ್ತಾನೆ ಆದರ್ಶ. ಆತನ ಅಮ್ಮ, ತಾವು ಕೂಡಿಟ್ಟ ಹಣದಿಂದ ಒಂದು ಲ್ಯಾಪ್‌ಟಾಪ್ ಕೊಡಿಸಿದ್ದರು. ಈ ಹುಡುಗ ಎಂಟನೇ ಕ್ಲಾಸ್‌ನಲ್ಲಿ ಓದುತ್ತಿದ್ದಾಗಲೇ ಸ್ಟಾರ್ಟ್ ಅಪ್ ಆರಂಭಿಸಲು ಹೋಗಿ ಕೈಸುಟ್ಟುಕೊಂಡ. ಆದರೆ, ಅದರಿಂದ ವಿಚಲಿತನಾಗಿ ಸುಮ್ಮನೇ ಕೂರಲಿಲ್ಲ. ‘ಬದಲಾವೋ’ ಎಂಬ ಹೊಸ ಯೋಜನೆಯೊಂದಿಗೆ ಬಂದ ಆತ, 1,300 ಕುಟುಂಬಗಳಿಗೆ ಸರ್ಕಾರದ ಸಾಮಾಜಿಕ ಕಲ್ಯಾಣ ಯೋಜನೆಗಳ ಲಾಭ ಸಿಗುವಂತೆ ನೋಡಿಕೊಂಡ. ಕೆಲವರು ಆಯುಷ್ಮಾನ್ ಭಾರತ್ ಕಾರ್ಡ್ ಪಡೆದರೆ, ಕೆಲವರಿಗೆ ಕೋವಿಡ್ ಲಸಿಕೆ ಹಾಕಿಸಲು ನೆರವಾದ. ನೂರಾರು ಮಕ್ಕಳ ಶಾಲಾ ಪ್ರವೇಶಕ್ಕೂ ಆನ್‌ಲೈನ್ ಅರ್ಜಿ ತುಂಬಿಕೊಟ್ಟು ಸಹಾಯ ಮಾಡಿದ.

ಹದಿನಾಲ್ಕು ವರ್ಷಗಳಾದಾಗ ಜೇಬಿನಲ್ಲಿ ಸಾವಿರ ರೂಪಾಯಿ ಇಟ್ಟುಕೊಂಡು ಮನೆಯಿಂದ ಹೊರಬಿದ್ದ ಆದರ್ಶ, ಐಐಟಿ–ಜೆಇಇ ಕೋಚಿಂಗ್ ಪಡೆಯಲು ಕೋಟಾಕ್ಕೆ ಬಂದ. ಗ್ರಂಥಾಲಯಗಳಲ್ಲಿ ಸಿಗುತ್ತಿದ್ದ ಉಚಿತ ವೈ–ಫೈ ನೆರವಿನಿಂದ ಮಾರ್ಗದರ್ಶಕರಿಗಾಗಿ ತಡಕಾಡಿದ. ಕೊನೆಗೆ ತಾನೇ ಒಂದು ಸ್ಕಿಲ್ಲೊ ಎಂಬ ಆನ್‌ಲೈನ್ ವೇದಿಕೆಯನ್ನೇ ಸ್ಥಾಪಿಸಿದ. ಬಡತನದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳಿಗೆ ಈ ವೇದಿಕೆ ಒಂದು ರೀತಿಯಲ್ಲಿ ಲಾಂಚಿಂಗ್ ಪ್ಯಾಡ್ ಆಯಿತು. ಸುಮಾರು 20 ಸಾವಿರ ವಿದ್ಯಾರ್ಥಿಗಳು ಈ ವೇದಿಕೆಯಿಂದ ಪ್ರಯೋಜನ ಪಡೆದು, ಮಿಂಚಿದ್ದಾರೆ. ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ, ಶಿಷ್ಯವೇತನ, ಫೆಲೋಷಿಪ್, ತಮ್ಮ ಸ್ಟಾರ್ಟ್ ಅಪ್‌ಗಳಲ್ಲಿ ಹೂಡಿಕೆ ಪಡೆದಿದ್ದಾರೆ.

‘ಆದರ್ಶನ ಕಥೆ ತುಂಬಾ ಪ್ರೇರಣೆದಾಯಕವಾಗಿದೆ. ಅದು, ವ್ಯಕ್ತಿಯೊಬ್ಬನ ವೈಯಕ್ತಿಕ ಸಾಧನೆ ಮಾತ್ರ ಆಗಿರದೆ ಸಮಾಜದಲ್ಲಿ ಬದಲಾವಣೆ ತರಬಯಸುವ ಎಲ್ಲರಿಗೂ ಸ್ಫೂರ್ತಿ, ಧೈರ್ಯ ತುಂಬುವಂಥದ್ದಾಗಿದೆ. ಈತನ ಸಾಹಸಗಾಥೆಯನ್ನು ಜಗತ್ತಿನ ಎಲ್ಲ ದಮನಿತರೂ ಕೇಳಿಸಿಕೊಳ್ಳಬೇಕು’ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ಚೆಗ್ ಇಂಕ್‌ನ ಅಧ್ಯಕ್ಷ ನಾಥನ್ ಶಲ್ಟ್ಜ್.

ಪ್ರಶಸ್ತಿಗಳಿಂದ ಮೈಮರೆಯದೆ ಮತ್ತೆ ಹೊಸದೇನನ್ನು ಮಾಡಬಹುದು ಎಂದು ಆದರ್ಶ ಈಗ ಚಿಂತಿಸುತ್ತಿದ್ದಾನೆ. ತನ್ನ ‘ಆದರ್ಶ’ಮಯ ವ್ಯಕ್ತಿತ್ವ ಪುಟಕ್ಕಿಟ್ಟ ಚಿನ್ನ ಎಂಬುದನ್ನು ಸಾಬೀತು ಮಾಡಲು ಹೊರಟಿದ್ದಾನೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65